**<u>ದಿನಾಂಕಃ28.11.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು.</u>**

**<u>ಪಾಟೀಸವಾಲುಃ ಶ್ರೀ.ವಿ.ಶ್ರೀಹರಿ ನಾಯ್ದು ವಕೀಲರಿಂದ ಒಂದನೇ ಎದುರುದಾರರ ಪರವಾಗಿ.</u>**

ಅಪಘಾತವಾದ ಸಮಯದಲ್ಲಿ ನನಗೆ ಸುಮಾರು 63 ವರ್ಷ ಎಂದರೆ ಸರಿ. ನಾನು ನಿವೃತ್ತ ಸರ್ಕಾರಿ ನೌಕರ ಎಂದರೆ ಸರಿ. ನನಗೆ 18,000/- ರೂಗಳು ಪಿಂಚಣಿ ಬರುತ್ತದೆ. ನಾನು ಮಾಡಿದ ವೈದ್ಯಕೀಯ ವೆಚ್ಚಗಳು ನನಗೆ ಸರ್ಕಾರದಿಂದ ಅಥವ ವಿಮೆಯಿಂದ ಹಿಂದಿರುಗಿಸಲಾಗಿದೆ ಎಂದರೆ ಸರಿಯಲ್ಲ. ನನಗೆ ವೈದ್ಯಕೀಯ ವೆಚ್ಚ ಹಿಂದಿರುಗಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೊಸಮಟ್ ಆಸ್ಪತ್ರೆ ಬಿಟ್ಟು ಬೇರೆ ಎಲ್ಲೂ ಚಿಕಿತ್ಸೆ ಪಡೆದಿರುವುದಿಲ್ಲ ಎಂದರೆ ಸರಿ. ಅಪಘಾತದಲ್ಲಿ ನನಗೆ ಕಾಲಿಗೆ ಬಿಟ್ಟು ಬೇರೆ ಎಲ್ಲೂ ಗಾಯಗಳು ಆಗಿರುವುದಿಲ್ಲ. ನಾನು ಹೃದಯಕ್ಕೆ ಸಂಬಂಧಿಸಿದಂತೆ ಚಿಕಿತ್ಸೆ ಪಡೆದಿದ್ದು, ಅದರ ವೆಚ್ಚಗಳನ್ನು ಸೇರಿಸಿದ್ದೇನೆ ಎಂದರೆ ಸರಿ. ನನಗೆ ಯಾವುದೇ ತೊಂದರೆ ಇರಲಿಲ್ಲ ಆದರೆ ಪರೀಕ್ಷೆ ಮಾಡಿಸಿಕೊಂಡಿದ್ದೇನೆ.

2. ಅಪಘಾತವಾದ ದಿನ ನಾನು ಮತ್ತು ಇನ್ನು ಇಬ್ಬರು ಸ್ನೇಹಿತರು ಹೋಗುತ್ತಿದ್ದು, ಅವರು ನನ್ನ ಮುಂದೆ ಹೋಗುತ್ತಿದ್ದರು. ನನಗೆ ಪಿ.ಪಿ ಮತ್ತು ಶುಗರ್ ಮೊದಲಿನಿಂದಲೂ ಇದ್ದು, ಅದಕ್ಕೆ ಚಿಕಿತ್ಸೆ ಪಡೆಯುತ್ತಿದ್ದೇನೆ. ಅದರ ಬಿಲ್ಲುಗಳನ್ನು ಕೂಡ ನೀಡಿದ್ದೇನೆ.

3. ಅಪಘಾತ ಆದ ಮರುದಿನ ಬೆಳಗ್ಗೆ 9.00 ಗಂಟೆಗೆ ದೂರು ನೀಡಿದ್ದೇನೆ ಎಂದರೆ ಸರಿ. ಅಪಘಾತವು ನಾನು ರಸ್ತೆ ದಾಟುವ ಸಮಯದಲ್ಲಿ ಆಗಿರುತ್ತದೆ ಎಂದರೆ ಸರಿಯಲ್ಲ. ಆದ್ದರಿಂದ ನಾನು ನಕಾಶೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅಪಘಾತವು ಕೆರೆಯ ಏರಿ ಮೇಲೆ ಆಗಿದೆ ಎಂದರೆ ಸರಿ. ಅಲ್ಲಿ ರಸ್ತೆ ದಾಟಲು ಯಾವುದೇ ಸೂಚನೆಗಳು ಇರಲಿಲ್ಲ ಎಂದರೆ ಸರಿ. ನಾನು ಫುಟ್‌ಪಾತ್ ಮೇಲೆ ಹೋಗುತ್ತಿದ್ದೆ. ಅಪಘಾತವು ಟಾರ್ ರಸ್ತೆಯಲ್ಲಿ ಆಗಿದೆ ಎಂದು ಪಂಚನಾಮೆಯಲ್ಲಿ ಬರೆದಿದೆ ಎಂದರೆ ಸರಿ. ನಾನು ಹೋಗುತ್ತಿದ್ದ ಫುಟ್‌ಪಾತ್ ಮುಖ್ಯರಸ್ತೆಯಲ್ಲಿ ಇದೆ. ಅಪಘಾತವು ರಸ್ತೆಯ ಅಂಚಿನಿಂದ ಎರಡು ಅಡಿ ದೂರದಲ್ಲಿ ಟಾರ್ ರಸ್ತೆಯಲ್ಲಿ ಆಗಿದೆ ಎಂದು ನಮೂದಾಗಿದೆ ಎಂದರೆ ಸರಿ. ಆದರೆ ಟಾರ್ ರಸ್ತೆಯ ಪಕ್ಕದಲ್ಲಿ ನನಗೆ ಅಪಘಾತ ಆಗಿದೆ. ಅಪಘಾತವು ನನ್ನ ತಪ್ಪಿನಿಂದ ಆದ ಕಾರಣ ದೂರನ್ನು ತಡವಾಗಿ ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಎದುರುದಾರರ ವಾಹನದ ವಿರುದ್ದ ಸುಳ್ಳು ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

4. ನಾನು ಮೂರು ಲಕ್ಷ ರೂಗಳನ್ನು ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಆಗಿರುವ ಎಲ್ಲಾ ತೊಂದರೆಗಳು ಸರಿಯಾಗಿದೆ ಎಂದರೆ ಸರಿಯಲ್ಲ. ನನಗೆ 63 ವರ್ಷ ಆಗಿರುವ ಕಾರಣ ಶಸ್ತ್ರ ಚಿಕಿತ್ಸೆ ಮಾಡಲು ಆಗುವುದಿಲ್ಲ ಎಂದರೆ ಸರಿಯಲ್ಲ. ನನಗೆ ಮುಂದಿನ ಶಸ್ತ್ರ ಚಿಕಿತ್ಸೆಗೆ ಎರಡು ಲಕ್ಷ ರೂಗಳು ಬೇಕಾಗುತ್ತದೆ ಎಂದು ವೈದ್ಯರು ಯಾವುದೇ ಪತ್ರ ನೀಡಿರುವುದಿಲ್ಲ. ಆದರೆ ಬಾಯಿಮಾತಿನಲ್ಲಿ ತಿಳಿಸಿದ್ದಾರೆ.

5. ನಾನು ನಿವೃತ್ತ ಪೋಲೀಸ್ ಅಧಿಕಾರಿ ಎಂದು ಪ್ರಮಾಣ ಪತ್ರದಲ್ಲಿ ತಿಳಿಸಿಲ್ಲ. ನಾನು ಟೇಲರಿಂಗ್ ಕೆಲಸ ಮಾಡುತ್ತಿದ್ದೆ ಮತ್ತು ಅದರಿಂದ ತಿಂಗಳಿಗೆ 30,000/- ರೂಗಳನ್ನು ದುಡಿಯುತ್ತಿದ್ದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ನನಗೆ ಇಬ್ಬರು ಮಕ್ಕಳಿದ್ದಾರೆ. ಒಬ್ಬ ಮಗಳ ಮದುವೆ ಆಗಿದೆ. ಮಗ ಕೆಲಸಕ್ಕೆ ಹೋಗುತ್ತಿದ್ದಾನೆ. ನಾನು ಯಾವುದೇ ಕೆಲಸ ಮಾಡುತ್ತಿಲ್ಲ ಮತ್ತು ಪಿಂಚಣಿಯಿಂದ ಜೀವನ ಮಾಡುತ್ತಿದ್ದು, ಅಪಘಾತದಿಂದ ನನಗೆ ಯಾವುದೇ ಆರ್ಥಿಕ ತೊಂದರೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಈಗಲೂ ಪಿಂಚಣಿ ಬರುತ್ತಿದೆ.

**<u>ಮರುವಿಚಾರಣೆಃ ಇಲ್ಲ.</u>**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿ, ಓದಿ ಹೇಳಿ ನಂತರ ಸಹಿ ಪಡೆಯಲಾಯಿತು).

ಓ ಹೇ ಕೇ ಸ ಇದೆ.

5 ನೇ ಅಪರ ನ್ಯಾಯಾಧೀಶರು,
ಲಘು ವ್ಯವಹಾರಗಳ ನ್ಯಾಯಾಲಯ,
24 ನೇ ಎಸಿಎಂಎಂ ಮತ್ತು ಸದಸ್ಯರು ಎಂಎಸಿಟಿ.